ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 16ನೇ ಮೇ, 1998ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 1997.
2. ಕರ್ನಾಟಕ ಮಾರಾಟ ತೆರಿಗೆ ಹಾಗೂ ಇತರ ಕಾನೂನಿನ (ತಿದ್ದುಪಡಿ) ವಿಧೇಯಕ 1998.
3. ಕರ್ನಾಟಕ ಧನವಿನಿಯೋಗ (ನಂ.1) ವಿಧೇಯಕ, 1998.
4. ಕರ್ನಾಟಕ ಧನವಿನಿಯೋಗ (ನಂ.2) ವಿಧೇಯಕ, 1998.

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಟ್ಟಿರುವುದರಿಂದ, ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರಾದ ಶ್ರೀ ಗೋವಿಂದೇಗೌಡರು ತಮ್ಮ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರವಾಗಿ ತಮ್ಮ ಸ್ಪೀಚ್ ರೆಡಿ ಮಾಡಿದ್ದಾರೆ, ಅದನ್ನು ಈಗ ಎಲ್ಲಾ ಸದಸ್ಯರಿಗೂ ಹಂಚಲಾಗುವುದು. ತಾವು ಅದನ್ನು ನೋಡಿಕೊಳ್ಳಬಹುದು, ಇದು ನಿಮ್ಮ ಅನುಕೂಲಕ್ಕಾಗಿ ಹಂಚುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಾರಿಗೆ ಸಚಿವರು ಈ ರೀತಿ ಉತ್ತರ ಕೊಟ್ಟರೆ ಒಳ್ಳೆಯದಲ್ವೇ?

ಉಪಾಧ್ಯಕ್ಷರು : ಆಯಿತು, ಎಲ್ಲರಿಗೂ ಈ ರೀತಿ ಕೊಡಿ ಎಂದು ಹೇಳೋಣ.

ಶ್ರೀ ವಿಶ್ವೇಶ್ವರ ಹೆಗಡೆ : ಉಳಿದ ಎಲ್ಲಾ ಮಂತ್ರಿಗಳು ಈ ರೀತಿ ಕೊಟ್ಟರೆ ಒಳ್ಳೆಯದಲ್ವೇ?

ಶ್ರೀ ಸಿ. ಭೈರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರಿಸಿರುವುದರಿಂದ ಇದು ಕಡತಕ್ಕೆ ಹೋಗುತ್ತದೆಯೇ?

ಉಪಾಧ್ಯಕ್ಷರು : ಇಲ್ಲಿ ಇದನ್ನು ಇಟ್ಟಿರುವುದರಿಂದ ಇದು ಕಡತಕ್ಕೆ ಹೋಗುತ್ತದೆ. ಎಲ್ಲಾ ಸದಸ್ಯರಿಗೂ ಇದನ್ನು ಹಂಚಲಾಗುವುದು. ಸದಸ್ಯರ ಅನುಕೂಲಕ್ಕಾಗಿ ಇದನ್ನು ಹಂಚಲಾಗುತ್ತದೆಯೇ ವಿನಾಃ ಇದು ಏನೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಸಿ. ಭೈರೇಗೌಡ : ಅಷ್ಟೇ ತಾನೇ ಇದು ಏನೂ ಕಡತಕ್ಕೆ ಹೋಗುವುದಿಲ್ಲ.

ಉಪಾಧ್ಯಕ್ಷರು : ಹೌದು, ಇದು ಕಡತಕ್ಕೆ ಹೋಗುವುದಿಲ್ಲ.